ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 17.12.2024.

**ಮುಖ್ಯ ವಿಚಾರಣೆಃ** ವಾದಿ ಪರ ಶ್ರೀ ಬಿ.ಎ.ಡಿ. ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ನಿಪಿ-2ರಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-**2(ಹೆಚ್)** ಎಂದು ಗುರುತಿಸಲಾಗಿರುತ್ತದೆ.

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಡಿ.ಎಸ್.ಎನ್. ವಕೀಲರಿಂದಃ

ನನಗೆ ಚಿಂಚನಸೂರು ಗ್ರಾಮದಲ್ಲಿ ಸರ್ವೆ ನಂ.329ರಲ್ಲಿ 5 ಎಕರೆ 35 ಗುಂಟೆ ಜಮೀನು ಇತ್ತು, ಆದರೆ ಅದನ್ನು ಈಗ ಮಾರಾಟ ಮಾಡಿರುತ್ತೇನೆ. ಸುಮಾರು 2 ವರ್ಷಗಳ ಹಿಂದೆ ಸದರಿ ಜಮೀನನ್ನು ಮಾರಾಟ ಮಾಡಿರುತ್ತೇನೆ. ಈ ಕೇಸಿನ ವಾದಿ ನನ್ನ ಅತ್ತಿಗೆಯಾದ ನಾಗಮ್ಮನ ತಂದೆಯಾಗಬೇಕು. ವಾದಿ ಈಗ ಅಷ್ಟಗಿ ಗ್ರಾಮದಲ್ಲಿ ಇರುತ್ತಾರೆ. ವಾದಿಗೆ ಕಿವಿ ಕೇಳುವುದಿಲ್ಲ, ಆದರೆ ಆರೋಗ್ಯವಾಗಿರುತ್ತಾರೆ. ಪ್ರತಿವಾದಿಯ ಪರಿಚಯ ನನಗೆ ಇರುತ್ತದೆ. ಪ್ರತಿವಾದಿಗೆ ಇಬ್ಬರು ಗಂಡು ಮಕ್ಕಳು, ಅವರೇಂದರೆ ಮುರಳಿಧರ್ ಮತ್ತು ರಾಮಕೃಷ್ಣ ಇರುತ್ತಾರೆ ಹಾಗೂ 5 ಜನ ಹೆಣ್ಣು ಮಕ್ಕಳು ಇರುತ್ತಾರೆ, ಅವರೆಂದರೆ, ಜಯವಂತ ಬಾಯಿ, ರಾಧಾಬಾಯಿ, ಯಶೋಧಾ, ವನಮಾಲ, ಇನ್ನೊಬ್ಬರ ಹೆಸರು ನನಗೆ ಪರಿಚಯ ಇರುವುದಿಲ್ಲ. ಮೇಲೆ ಹೇಳಿದ ಎಲ್ಲಾ ಪ್ರತಿವಾದಿಯ ಮಕ್ಕಳು ಜೀವಂತ ಇರುತ್ತಾರೆ. ವಾದಿಗೆ ಹೆಂಡತಿ ಮಕ್ಕಳು ಇರುತ್ತಾರೆ ಎಂದರೆ, ಸಾಕ್ಷಿ ಹೆಂಡತಿ ತಿರಿಕೊಂಡಿರುತ್ತಾರೆ, ಮಕ್ಕಳು ಇರುತ್ತಾರೆ. ಅವರೆಂದರೇ, ಸಿದ್ದು ಮತ್ತು ರಾಜೇಂದ್ರ ಹಾಗೂ ಒಬ್ಬ ಹೆಣ್ಣು ಮಗಳು ಇದ್ದು, ಅವಳ ಹೆಸರು ನನಗೆ ನೆನಪು ಇರುವುದಿಲ್ಲ. ಎಲ್ಲ ಮೂರು ಜನ ಮಕ್ಕಳು ವಯಸ್ಕರು ಇದ್ದಾರೆ.

ವಾದಿಯ ಇಬ್ಬರು ಗಂಡು ಮಕ್ಕಳು ಕೂಲಿ ಮಾಡುತ್ತಾರೆ.

ಸುಮಾರು 14 ವರ್ಷದ ಹಿಂದೆ ಪ್ರತಿವಾದಿ ತನ್ನ ಜಮೀನನ್ನು ಮಾರಾಟ ಮಾಡುತ್ತಿದ್ದೇನೆ ಎಂದು ನನಗೆ ಹೇಳಿದ್ದಳು. ದಿಃ 17.07.2010 ರಂದು ಪ್ರತಿವಾದಿ ಜಮೀನನ್ನು ಮಾರಾಟ ಮಾಡುತ್ತೇನೆ ಎಂದು ಹೇಳಿದ್ದಳು. ಸದರಿ ವ್ಯವಹಾರ ಪ್ರತಿವಾದಿ ಮನೆಯಲ್ಲಿ ಮಧ್ಯಾಹ್ನ ಆಗಿರುತ್ತದೆ. ಸದರಿ ವ್ಯವಹಾರದಲ್ಲಿ ನಾನು, ವಾದಿ, ಪ್ರತಿವಾದಿ, ಪಾಂಡುರಂಗ, ಪ್ರತಿವಾದಿ ಮಗ ರಾಮಕೃಷ್ಣ, ಮುರಳಿಧರ ಹಾಜರಿದ್ದರು. ಸದರಿ ದಾವಾ ಸ್ವತ್ತು ಸುಮಾರು ರೂ.17 ಲಕ್ಷಕ್ಕೆ ಮಾರಾಟ ಮಾಡುತ್ತೇನೆ ಎಂದು ಹೇಳಿದ್ದಳು. ಆದರೆ ಎಲ್ಲರು ಕೂಡಿ ನಿರ್ಣಯ ಮಾಡಿ ರೂ.10,40,000/-ಕ್ಕೆ ಮಾತುಕತೆಯಾಗಿರುತ್ತದೆ. ಮಾತುಕತೆ ಕಾಲಕ್ಕೆ ಹಣ ಕೊಟ್ಟಿರುವುದಿಲ್ಲ. ಮಾತುಕತೆಯಾದ 2-3 ತಿಂಗಳ ನಂತರ ನಾವು ಹಣ ತಂದಿದ್ದೇವೆ ಎಂದು ಪ್ರತಿವಾದಿಗೆ ಹೇಳಿರುತ್ತೇವೆ, ಆಗ ಅವರು ನೋಂದಣಿ ಮಾಡಿಕೊಳ್ಳೂಣೋ ಎಂದು ಹೇಳಿದ್ದರಿಂದ ಆಳಂದಗೆ ಬಂದಿರುತ್ತೇವೆ.

ನಾನು ಮೇಲೆ ಹೇಳಿದ ದಿಃ 17.07.2010 ರಂದು ಹಣ ಆಳಂದದ ಸೂರ್ಯಕಾಂತ ಮಡ್ಡೆ ಆಫೀಸ್‌ನಲ್ಲಿ ಕೊಟ್ಟಿರುತ್ತೇವೆ, ಆದರೆ ವ್ಯವಹಾರ ಅದಕ್ಕಿಂತ ಮುಂಚೆ ಆಗಿತ್ತು. ಮಾತುಕತೆ ವ್ಯವಹಾರ ನೊಂದಣಿಕ್ಕಿಂತ 2-3 ತಿಂಗಳ ಮುಂಚೆ ಆಗಿತ್ತು. ಮಾತುಕತೆಯಾದ ಕಾಲಕ್ಕೆ ಬಯಾನ್ (ಮುಂಗಡ) ಹಣ ಅಂತ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ. ಮಾತುಕತೆ ದಿನ ಯಾವುದೇ ದಾಖಲೆಯನ್ನು ಬರೆದಿರುವುದಿಲ್ಲ.ಸದರಿ ಹಣವನ್ನು ಮಡ್ಡೆ ಆಫೀಸ್‌ನಲ್ಲಿ ಕೊಡುವಾಗ ಪ್ರತಿವಾದಿ ಮಕ್ಕಳು ಹಾಜರು ಇರಲಿಲ್ಲ, ಆದರೆ ನಾವು ಕೇಳಿರುತ್ತೇವೆ ಪ್ರತಿವಾದಿ ಅದು ನನ್ನ ಹೊಲ ಇದೆ ತಾಯಿ ಕಡೆಯಿಂದ ಬಂದಿದ್ದು ಇದೆ, ಕಾರಣ ಮಕ್ಕಳು ಬೇಡ ಎಂದು ಹೇಳಿದ್ದರು. ನಾನು ಮತ್ತು ನನ್ನ ಮಾವ ಇಬ್ಬರು ಕೂಡಿ ಪ್ರತಿವಾದಿಗೆ ಮಾತುಕತೆಯಾಗುವಾಗ ನಿಮ್ಮ ಮಕ್ಕಳು ಇದ್ದರು, ಅವರನ್ನು ಕೂಡಾ ನೋಂದಣಿ ಕಾಲಕ್ಕೆ ಕರೆದುಕೊಂಡು ಬನ್ನಿ ಎಂದರೂ ಕೂಡಾ, ಪ್ರತಿವಾದಿ ನಾನು ಇದ್ದೇನೆ ಅಲ್ಲ ಅವರು ಏಕೆ ಎಂದು

ಹೇಳಿರುತ್ತಾರೆ.

ಪ್ರತಿವಾದಿ ನೀಡಿದ ಹಣದ ಮುಖ ಬೆಲೆ ಎಷ್ಟು ಇತ್ತು ಎಂದು ಹೇಳಲು ಬರುವುದಿಲ್ಲ, ಆದರೆ ರೂ.10,40,000/- ಇತ್ತು. ನಿಪಿ-2 ದಾಖಲೆಯಾದ ಒಂದು ವರ್ಷಕ್ಕೆ ಅಂದರೆ ಫಾರಂ ನಂ.10 ಆದ ನಂತರ ನಿಮಗೆ ನೋಂದಣಿ ಮಾಡಿಕೊಡುತ್ತೇನೆ ಎಂದು ಪ್ರತಿವಾದಿ ವಾದಿಗೆ ಹೇಳಿದ್ದಳು. ಪ್ರತಿವಾದಿ ಫಾರಂ ನಂ.10ನ್ನು ತಯಾರಿಸಿಕೊಂಡಿರುತ್ತಾಳೆ, ನಂತರ ನಾವು ಕೇಳಿರುತ್ತೇವೆ ಆಗ ಅವಳು ಮುಂದೂಡುತ್ತಾ ಬಂದಿರುತ್ತಾರೆ. ವಾದಿ ಸದರಿ ರೂ.10,40,000/- ಹಣವನ್ನು ಯಾವ ಬ್ಯಾಂಕಿನಿಂದ ತಂದಿದ್ದರು ಎಂದರೆ, ಸಾಕ್ಷಿ ತನ್ನ ಮಕ್ಕಳು ಕೊಟ್ಟ ಹಣ ಹಾಗೂ ಊರಿನ ಹೊಲದಿಂದ ಬಂದ ಆಧಾಯದಿಂದ ಒಟ್ಟುಗೂಡಿಸಿಕೊಂಡು ಹಣ ತಂದಿದ್ದರು ಎಂದು ನುಡಿಯುತ್ತಾರೆ. ವಾದಿ ಜಮೀನು ಊರಿನಲ್ಲಿ ಸುಮಾರು 7-8 ಎಕರೆ ಒಣ ಬೇಸಾಯ ಜಮೀನು ಇರುತ್ತದೆ. ವಾದಿ ಮಕ್ಕಳು ಕೂಲಿ ಮಾಡುತ್ತಿರುವ ಕಾರಣ ಆತನಿಗೆ ರೂ.10,40,000/- ಹಣವನ್ನು ಒಂದೇ ಸಮಯಕ್ಕೆ ಕೊಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಮಡ್ಡೆ ಕಛೇರಿಯಲ್ಲಿ ರೂ.10,40,000/-ಹಣವನ್ನು ಕೊಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನನ್ನ ಹಾಗೂ ಇತರರ 8 ಜನರ ವಿರುದ್ಧ ಒ.ಎಸ್.ನಂ.110/2017 ಅಂತ ಸಿವಿಲ್ ನ್ಯಾಯಾಧೀಶರು ನ್ಯಾಯಾಲಯದಲ್ಲಿ ನಿರ್ಬಂಧ ಕಾದ್ನೆ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆ ಪ್ರತಿವಾದಿ ಪರವಾಗಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ನಾವು ಪುನಃ ಹರಕತ್ ಮಾಡಿದ್ದರಿಂದ ಪ್ರತಿವಾದಿ ನಮ್ಮ ವಿರುದ್ಧ ಇ.ಪಿ.ನಂ.2/2022 ಅಂತ ಅಮಲು ಬಜಾವಣೆ ಹಾಕಿದ್ದು ಅದು ಕೂಡಾ ಚಾಲ್ತಿಯಲ್ಲಿ ಇದೆ ಎಂದರೆ, ಇರಬಹುದು ಅದರ ಬಗ್ಗೆ ನಮಗೆ ಗೊತ್ತಿಲ್ಲ. ಸದರಿ ಕೇಸಿನಲ್ಲಿ ಪೋಲೀಸರು ಕೂಡಾ ನಮಗೆ ಎಚ್ಚರಿಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕೇಸ್ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಈ ಕೇಸಿನಲ್ಲಿ

ವಾದಿ ನೋಟೀಸ್ ಕೊಟ್ಟ ನಂತರ ಪ್ರತಿವಾದಿ ನಮ್ಮನ್ನು ಬಂದು ಕೇಳಿರುತ್ತಾಳೆ, ಆಗ ನಾವು ಪ್ರತಿವಾದಿಗೆ ನೀನು ನಿಪಿ-2ರಂತೆ ನಡೆದುಕೊಳ್ಳದೇ ಇರುವ ಕಾರಣ, ನೋಟೀಸ್ ಕಳುಹಿಸಿರುತ್ತಾರೆ ಎಂದು ಹೇಳಿದ್ದು ಆ ನಂತರ ಪ್ರತಿವಾದಿ ನಮ್ಮ ವಿರುದ್ಧ ಮೇಲೆ ಹೇಳಿದ ದಾವೆ ಸಲ್ಲಿಸಿರುತ್ತಾಳೆ ಎಂದು ನುಡಿಯುತ್ತಾರೆ. ವಾದಿ, ಪ್ರತಿವಾದಿಗೆ ಯಾವತ್ತು ನೋಟೀಸ್ ಕೊಟ್ಟಿರುತ್ತಾರೆ ಎಂದು ದಿನಾಂಕ ನನಗೆ ನೆನಪು ಇರುವುದಿಲ್ಲ.

ನಿಪಿ-19ರಂತೆ ವಾದಿ, ಪ್ರತಿವಾದಿಗೆ ನೋಟೀಸ್ ಕೊಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿ 2017ರಲ್ಲಿ ಕೇಸ್ ಹಾಕಿದ್ದು ನಿಪಿ-19 2022ರಲ್ಲಿ ಕಳುಹಿಸಿದ್ದು ಇರುತ್ತದೆ ಎಂದರೆ, ಸಾಕ್ಷಿ ಅದಕ್ಕಿಂತ ಮುಂಚೆ ನಾವು ಹೇಳಿದ್ದು ಇರುತ್ತದೆ ಎಂದು ನುಡಿಯುತ್ತಾರೆ. ನಾವು ಪ್ರತಿವಾದಿಗೆ ನೋಂದಣಿ ಮಾಡಿಕೊಡು ಎಂದು ಹೇಳಿದ್ದರಿಂದ, ಅವಳು ನಮ್ಮ ವಿರುದ್ಧ ಸುಳ್ಳು ಕೇಸ್ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೇಗಾದಾರೂ ಮಾಡಿ ಪ್ರತಿವಾದಿ ಹೊಲ ಹೊಡೆಯಬೇಕೆಂಬ ಉದ್ದೇಶದಿಂದ, ನಾವು ವಾದಿ ಮೂಲಕ ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿ ತನಗೆ ಮನೆ ಅಡೆಚಣೆ ಸಲುವಾಗಿ ರೂ.5 ಲಕ್ಷ ಹಣ ಬೇಕಾಗಿತ್ತು ಆ ಹಣವನ್ನು ಸಾಲವಾಗಿ ಪಡೆದುಕೊಂಡಿದ್ದರಿಂದ ಅವಳು ನಿಪಿ-2ರ ದಾಖಲೆ ಅಡಮಾನ ಪತ್ರ ಅಂತ ಬರೆದುಕೊಟ್ಟಿರುತ್ತಾಳೆ ಹೊರತು, ಕ್ರಯ ಕರಾರು ಪತ್ರ ಅಂತ ಎಂದೂ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಪ್ರತಿವಾದಿ ಸದರಿ ರೂ.5 ಲಕ್ಷ ಹಣವನ್ನು ಮರಳಿ ಕೊಡುತ್ತೇವೆ ಎಂದು ನನಗೆ ಮತ್ತು ನಮ್ಮ ಮಾವನಿಗೆ ಹೇಳಿದರೂ ಕೂಡಾ ನಾವು ವಿನಾ ಕಾರಣ ಜಮೀನು ಹೊಡೆಯವ ಉದ್ದೇಶದಿಂದ ಈ ಸುಳ್ಳು ದಾವೆ ಮಾಡಿರುಸಿತ್ತೇವೆ ಎಂದರೆ ಸರಿಯಲ್ಲ.

ಸದರಿ ರೂ.5 ಲಕ್ಷದ ವ್ಯವಹಾರ ದಿಃ 16.07.2010ರಂದು ಆಗಿರುತ್ತದೆ ಎಂದರೆ ಸರಿಯಲ್ಲ. 2013ರಲ್ಲಿ ಪ್ರತಿವಾದಿ ಹಣ ತಂದಿರುತ್ತೇನೆ ಎಂದು, ನನಗೆ ಮತ್ತು ನಮ್ಮ ಮಾವನಿಗೆ ಹೇಳಿರುತ್ತಾಳೆ

ಎಂದರೆ ಸರಿಯಲ್ಲ. ಆಗ ನನ್ನ ಮಾವ ತಾನು ವಾಪಿಯಲ್ಲಿ ಇರುತ್ತೇನೆ ಬಂದ ನಂತರ ಕೊಡಿರೀ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಮತ್ತು ನನ್ನ ಮಾವ ಮುಂದೂಡುತ್ತಾ ಬಂದಿದ್ದರಿಂದ ಪ್ರತಿವಾದಿ ಶ್ರೀ ಎಸ್.ಡಿ. ಬೋಸಗೆ ವಕೀಲರಿಂದ ದಿಃ 09.06.2017 ರಂದು ಒಂದು ನೋಟೀಸ್ ಕೂಡಾ ನಮ್ಮ ಮಾವನಿಗೆ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನೋಟೀಸ್ ಕೂಡಾ ನಮ್ಮ ಮಾವ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಎಂದೂ ದಾವಾ ಸ್ವತ್ತುನ್ನು ವಾದಿಗೆ ಮಾರಾಟ ಮಾಡಿಲ್ಲ ಹಾಗೂ ನಾನು ಮತ್ತು ನಮ್ಮ ಮಾವ ಸೇರಿಕೊಂಡು ದಾವಾ ಸ್ವತ್ತುನ್ನು ಹೊಡೆಯಬೇಕೆಂದು ಈ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**